**<u>ಸಾಕ್ಷಿಯನ್ನು ದಿಃ 08.06.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಈಗಾಗಲೆ ತಿಳಿಸಿರುತ್ತಾರೆ .</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಬಿ ವಕೀಲರಿಂದಃ-</u>**

ನಾನು 9 ನೇ ತರಗತಿವರೆಗೆ ಓದಿರುತ್ತೇನೆ . ನನ್ನ ಮಗ ಡಾಕ್ಟರ್ . ನನ್ನ ಪೂರ್ಣ ಹೆಸರು ಹೆಚ್ ಎಸ್ ಮೂರ್ತಾಚಾರ್ , ನನ್ನ ಇನ್ನೊಂದು ಹೆಸರು ಹೆಚ್ ಎಸ್ ಮೂರ್ತಿ ಆಗಿರುತ್ತದೆ . ನನ್ನ ಹೆಂಡತಿಯ ಹೆಸರು ಕಾಮಾಕ್ಷಿ . ನನ್ನ ಹೆಂಡತಿ ಈ ಕೇಸಿನ 2 ನೇ ಪ್ರತಿವಾದಿ ಯಾಗಿದ್ದು ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಪತ್ರವನ್ನು ಬರೆದು ಕೊಟ್ಟಿಲ್ಲ . ನನ್ನ ಹೆಂಡತಿ ಲಿಖಿತ ಹೇಳಿಕೆ ಪತ್ರ ಸಲ್ಲಿಸುವ ವೇಳೆಯಲ್ಲಿ ವಕೀಲರ ಬಂದಿರುವುದಿಲ್ಲ . ನನ್ನ ಪ್ರಮಾಣ ಪತ್ರದಲ್ಲಿ ನನ್ನ ಹಾಗೂ ನನ್ನ ಹೆಂಡತಿ 2 ನೇ ಪ್ರತಿವಾದಿಯ ಪರವಾಗಿಯೂ ಸಹ ಸಲ್ಲಿಸಲು ನಾನು ಸಕ್ಷಮ ವ್ಯಕ್ತಿ ಆಗಿರುತ್ತೇನೆ ಎಂದು ಬರೆಸಿರುವುದಿಲ್ಲ . ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ . ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರವನ್ನು ವಕೀಲರ ಮೂಲಕ ಓದಿಸಿ ತಿಳಿದುಕೊಂಡಿರುವುದಿಲ್ಲ . ಆ ರೀತಿ ತಿಳಿದುಕೊಳ್ಳಲು ತೊಂದರೆ ಇತ್ತ ಎಂದರೆ ಹಾಗೇನಿಲ್ಲ ಎನ್ನುತ್ತಾರೆ .

ನಾನು ಮರಗೆಲಸ ಮಾಡುತ್ತೇನೆ . ಮರಗೆಲಸವನ್ನು ಹೊರತು ಪಡಿಸಿ ಬೇರೆ ಏನು ಮಾಡುವುದಿಲ್ಲ . ನನಗೆ ಶ್ರೀ ವೆಂಕಟೇಶ್ವರ ಸಾಮಿಲ್ ಹಾಗೂ ವುಡ್ ಇಂಡಷ್ಟ್ರಿಸ್ , ಹೆಚ್ ಡಿ ಕೋಟೆಯಲ್ಲಿ ಇರುತ್ತದೆ ಎಂದರೆ ಸರಿ. ಹೆಚ್ ಡಿ ಕೋಟೆ ತಾಲೂಕಿನ ಹೈರ್ಗೆ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ ಮಟ್ಟಕೆರೆ ಯಲ್ಲಿ ಪೆಟ್ರೋಲ್ ಬಂಕ್ ಇರುತ್ತದೆ . ಅದೇ ರೀತಿ ನಂಜನಗೂಡು, ಎಲಚರೆಗೆ ಗೇಟ್ , ಲಕ್ಷ್ಮಣ ಪುರದಲ್ಲಿ ವೆಂಕಟೇಶ್ವರ ಸ್ಟೋನ್ ಕ್ರಶರ್ ಮತ್ತು ಎಂ ಸ್ಯಾಂಡ್ ಇಂಡಷ್ಟ್ರಿಸ್ ಇದೆ ಎಂದರೆ ಸರಿಯಲ್ಲ . ದಿಃ 25.05.2022 ರಲ್ಲಿ ಸದರಿ ವೆಂಕಟೇಶ್ವರ ಸ್ಟೋನ್ ಕ್ರಶರ್ ಮತ್ತು ಎಂ ಸ್ಯಾಂಡ್ ಇಂಡಷ್ಟ್ರಿಸ್ ನ ಪ್ರಾರಂಭಿಸಲು ಆಹ್ವಾನ ಪತ್ರಿಕೆ ಸಲ್ಲಿಸಲಾಗಿದೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಯಾವುದೇ ಇಂಡಷ್ಟ್ರಿಸ್ ಇಲ್ಲ ಎನ್ನುತ್ತಾರೆ . ಹೈರ್ಗೆ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ ಮಟ್ಟಕೆರೆಯ ಹೋಟಲ್ ಇಂಟರ್ ನ್ಯಾಷನಲ್ ಇದೆ ಎಂದರೆ ಸಾಕ್ಷಿಯು ಅದನ್ನು

ಮಗನಿಗೆ ಕೊಟ್ಟಿರುತ್ತೇನೆ . ಅದೇ ರೀತಿ ಮಗನ ಹೆಸರಿಗೆ ವೆಂಕಟೇಶ್ವರ ಸ್ಟೋನ್ ಕ್ರಶರ್ ಮತ್ತು ಎಂ ಸ್ಯಾಂಡ್ ಇಂಡಸ್ಟ್ರಿಸ್ ಇರುತ್ತದೆ .

ನಾನು ಮೇಲೆ ಹೇಳಿದ ಎಲ್ಲಾ ಪತ್ರ ವ್ಯವಹಾರಗಳನ್ನು ಮಾಡಲು ಯಾವುದೇ ಖಾಲಿ ಪತ್ರಕ್ಕೆ ಸಹಿ ಮಾಡುವುದಿಲ್ಲ ಎಂದರೆ ಸಾಕ್ಷಿಯು ನಾನು ಸಹಿ ಮಾಡಿರುವುದಿಲ್ಲ ಎನ್ನುತ್ತಾರೆ . ಸಾಮಾನ್ಯವಾಗಿ ಯಾವುದೇ ಖಾಲಿ ಪತ್ರಕ್ಕೆ ನಾನು ಸಹಿ ಮಾಡುವುದಿಲ್ಲ ಎಂದರೆ ಸರಿ . ನನ್ನ ಪ್ರಮಾಣ ಪತ್ರ ಹಾಗೂ ಲಿಖಿತ ಹೇಳಿಕೆಯಲ್ಲಿ ಖಾಲಿ ಪತ್ರದಲ್ಲಿ ಸಹಿ ಪಡೆದಿದ್ದರು ಎಂದು ಹೇಳಿದ್ದು ಸುಳ್ಳು ಎಂದರೆ ಸಾಕ್ಷಿಯು ನಾನೇಕೆ ಹಾಗೆ ಹೇಳಲಿ ಎನ್ನುತ್ತಾರೆ .

ನಿಪಿ.1. ರಲ್ಲಿನ ಸಹಿ ನನ್ನದು ಎಂದರೆ ಸರಿ , ಹೆಬೆಟ್ಟಿನ ಗುರುತು ಯಾರದ್ದು ಎಂದು ನನಗೆ ಗೊತ್ತಿಲ್ಲ. ನಿಪಿ.1 ರ ಆನ್ ಡಿಮ್ಯಾಂಡ್ ಪ್ರನೋಟೀನಲ್ಲಿ ಮೊದಲ ಹಾಗೂ ಎರಡನೇ ಪುಟಗಳಲ್ಲಿ ಇರುವ ಸಹಿ ನನ್ನದೆ . ಸದರಿ ದಾಖಲೆಯಲ್ಲಿನ ಹಣ ಸಂದಾಯ ರಶೀದಿಯಲ್ಲಿ ನನ್ನದೇ ಸಹಿ ಇರುತ್ತದೆ . ನಿಪಿ.1 ರಲ್ಲಿನ ಸಾಕ್ಷಿದಾರರಾದ ಜಯಂತ್ ಕೆ ಎಂ ಎನ್ನುವವರು ನನ್ನ ಮಗ . ಹಣ ಸಂದಾಯ ರಶೀದಿಯಲ್ಲಿ ಕೂಡ ನನ್ನ ಮಗ ಸಹಿ ಮಾಡಿರುತ್ತಾನೆ ಎಂದರೆ ಸರಿ . ನಿಪಿ.1 ಕ್ಕೆ ಸಹಿ ಮಾಡುವ ಮೊದಲು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ .

ನಿಪಿ.2 ಮತ್ತು 8 ಬ್ಯಾಂಕ್ ಆಫ್ ಬರೋಡದ ಚೆಕ್ಕುಗಳು ನನ್ನ ಹೆಂಡತಿಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.2 ಮತ್ತು 8 ಚೆಕ್ಕುಗಳನ್ನು ನಿಪಿ.1 ನ್ನು ಬರೆದ ದಿನದಂದೇ ಚೆಕ್ಕನ್ನು ವಾದಿಯ ಹೆಸರಿಗೆ ಬರೆಸಿ ಕೊಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ . ದಿಃ 09.03.2023 ರಲ್ಲಿ ವಾದಿ ವಕೀಲರ ಮೂಲಕ ನಮಗೆ ನೋಟೀಸನ್ನು ಕಳುಹಿಸಿದ್ದರು ಎಂದರೆ ಸರಿ . ಸದರಿ ನೋಟೀಸು ನನಗೂ ಹಾಗೂ ನನ್ನ ಹೆಂಡತಿಗೂ ಜಾರಿಯಾಗಿರುತ್ತದೆ ಎಂದರೆ ಸರಿ. ನಿಪಿ.17 ಮತ್ತು 18 ರಂತೆ ಜಾರಿ ಯಾಗಿರುತ್ತದೆ ಎಂದರೆ ಸರಿ . ವಾದಿಯವರು ಪೆಟ್ರೋಲ್ ಬಂಕ್ ಇರುವ ಜಾಗ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಳಾಸ ಎರಡಕ್ಕೂ ವಾದಿಯವರು ನೋಟೀಸ್ ಕಳುಹಿಸಿದ್ದರು ಎಂದರೆ ಸಾಕ್ಷಿಯು ನಾನು ಅದಕ್ಕೆ ನೋಟೀಸ್ ಕಳುಹಿಸಿರುತ್ತೇನೆ . ಎರಡು ವಿಳಾಸಗಳಿಗೂ ಬಂದಂತ ನೋಟೀಸ್ ಗಳು ನನಗೆ ಮತ್ತು ನನ್ನ ಹೆಂಡತಿಗೆ

ಇಬ್ಬರಿಗೂ ಜಾರಿ ಯಾಗಿರುತ್ತದೆ ಎಂದರೆ ಸರಿ . ದಿಃ 09.03.2023 ರಲ್ಲಿ ಕಳುಹಿಸಿದ ನೋಟೀಸಿನಲ್ಲಿ ಹಣ ತೆಗೆದುಕೊಂಡ ಬಗ್ಗೆ ಹಾಗೂ ಚೆಕ್ಕುಗಳನ್ನು ಕೊಟ್ಟ ಬಗ್ಗೆ ತಿಳಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ .

ದಿಃ 09.03.2023 ರ ನೋಟೀಸಿಗೆ ನಾನು ಉತ್ತರ ಕೊಟ್ಟಿರುತ್ತೇನೆ . ಹಾಗೆ ಪ್ರತ್ಯುತ್ತರ ನೋಟೀಸ್ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ . ಸದರಿ ದಾಖಲೆಯನ್ನು ಹಾಜರು ಪಡಿಸಲು ತೊಂದರೆ ಇಲ್ಲ . ನನ್ನ ಪ್ರಮಾಣ ಪತ್ರದಲ್ಲಿ ಎರಡು ಖಾಲಿ ಚೆಕ್ಕುಗಳನ್ನು ಹೇಳಿ ಬರೆಸಿರುತ್ತೇನೆ ಎಂದರೆ ಸುಳ್ಳು ಆಗಿರುತ್ತದೆ . ನಿಪಿ.1 ನ್ನು ಆಂಡ್ ಡಿಮ್ಯಾಂಡ್ ಪ್ರನೋಟನ್ನು ಮೈಸೂರಿನಲ್ಲಿ ತಯಾರಿಸಲಾಗಿದೆ . ಅದಕ್ಕೆ ಸಾಕ್ಷಿಯಾಗಿ ಯಾರು ಯಾರು ಸಹಿ ಮಾಡಿದ್ದರು ಎಂದರೆ ನಾನು ಮತ್ತು ನನ್ನ ಮಗ ಸಹಿ ಮಾಡಿರುತ್ತೇವೆ ಎನ್ನುತ್ತಾರೆ , ಜೊತೆಗೆ ಮೇಡಂ ಮಾಡಿರುತ್ತಾರೆ ಎನ್ನುತ್ತಾರೆ . ಸಾಕ್ಷಿಯಾಗಿ ನಿಪಿ.1 ಕ್ಕೆ ವಾದಿಯ ಮಗ ಸಹಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿ ವಿಚಾರವಾಗಿ ನಾನು ಲಿಖಿತ ಹೇಳಿಕೆಯಲ್ಲಿ ಬರೆಸಿ ಹಾಕಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ . ನಿಪಿ.1 ದಾಖಲೆಯನ್ನು ಬರೆಸುವ ಕಾಲಕ್ಕೆ ಇಸಿ ದಿಃ 07.05.1993 ರ ಶುದ್ಧ ಕ್ರಯ ಪತ್ರ ವಾದಿಗೆ ಕೊಟ್ಟಿದ್ದೆವು ಎಂದರೆ ಸರಿ . ಸದರಿ ದಾಖಲೆಗಳನ್ನು ಕೊಟ್ಟ ಬಗ್ಗೆ ನಿಪಿ.1 ರಲ್ಲಿ ನಮೂದಿಸಲಾಗಿದೆ ಎಂದರೆ ಸರಿ . ವಾದಿಯ ಹತ್ತಿರ ಹಣ ಕೇಳಿದಾಗ ವಾದಿ 10 ಲಕ್ಷ ಹಣ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 7.5 ಲಕ್ಷ ಕೊಟ್ಟಿರುತ್ತಾರೆ ಎನ್ನುತ್ತಾರೆ . ದಿಃ 16.04.2021 ರಿಂದ ವಾದಿಯವರು ದಾವೆ ಸಲ್ಲಿಸುವ ವರೆಗೂ ನಾನು ಕೇವಲ 7.5 ಲಕ್ಷ ಪಡೆದಿರುವುದು 10 ಲಕ್ಷ ಅಲ್ಲ ಎಂದು ಹೇಳಿ ವಕೀಲರ ಮೂಲಕ ನೋಟೀಸನ್ನು ಕೊಟ್ಟಿದ್ದೀರಾ ಎಂದರೆ ನನ್ನ ವಕೀಲರಾದ ಚಂದ್ರಶೇಖರ್ ರವರಿಗೆ ಹೇಳಿದ್ದೆ ಎನ್ನುತ್ತಾರೆ .

ದಿಃ 16.10.2024 ರಲ್ಲಿ ನಾನು ಹಾಗೂ ನನ್ನ ವಕೀಲರು ಅಸಲು 10 ಲಕ್ಷ , ಬಡ್ಡಿ ಸೇರಿಸಿ ರೂ. 1 ಲಕ್ಷ 75 ಸಾವಿರ ಲೋಕ್ ಆದಾಲತ್ತಿನಲ್ಲಿ ಕೊಡುವುದಾಗಿ ತೀರ್ಮಾನವಾಗಿತ್ತು ಸಾಕ್ಷಿಯು ಆ ಸಮಯದಲ್ಲಿ ನಾನು ಒಪ್ಪಿರಲಿಲ್ಲ ಎನ್ನುತ್ತಾರೆ . ದಿಃ 16.10.2024 ರಂದು ನಾನು , ನನ್ನ ವಕೀಲರು, ವಾದಿ ಹಾಗೂ ವಾದಿಯ ವಕೀಲರ ಸಮಕ್ಷಮ ದಲ್ಲಿ ನ್ಯಾಯಾಲಯದಲ್ಲಿ ವಾದಿ 12 ಲಕ್ಷ ರೂ. ಕೇಳಿದ್ದು ಅದಕ್ಕೆ ನ್ಯಾಯಾಲಯವು 11.75 ಲಕ್ಷ ಕೊಡುವುದಾಗಿ ತೀರ್ಮಾನಿಸಿತ್ತು ಎಂದರೆ ನಾನು ಒಪ್ಪಿರಲಿಲ್ಲ ಎನ್ನುತ್ತಾರೆ . ಎಲ್ಲಾ ವ್ಯವಹಾರಗಳು ಕಾನೂನಿನ ಪರವಾಗಿದ್ದರೂ ಕೂಡ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿಯವರು ನನಗೆ ತೊಂದರೆ ಕೊಟ್ಟ ಬಗ್ಗೆ ನಾನು ದೂರು ಕೊಟ್ಟಿಲ್ಲ . ನನ್ನ ಪ್ರಮಾಣ ಪತ್ರದಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸಾಕ್ಷಿ ನಾನು ಆ ರೀತಿ ಬರೆಸಿಲ್ಲ 7.5 ಲಕ್ಷ ಕೊಡಲು ನಾನು ಸಿದ್ಧನಿರುತ್ತೇನೆ ಎಂದು ನುಡಿಯುತ್ತಾರೆ . ನಾನು 7.5 ಲಕ್ಷ ಹಣ ಪಡೆದಿಲ್ಲ 10 ಲಕ್ಷ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.